(ಸಾಕ್ಷಿಯನ್ನು ಈ ದಿನ ದಿನಾಂಕ 10.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಗಿದೆ)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :**

11. ನಿಪಿ 14, 21 ಮತ್ತು 26 ಗಳಿಗೆ ನಾವು ಉತ್ತರಿಸಿದ್ದು ನೆನಪಿಲ್ಲ. ವಾದಿಗೆ ನಾವು ಹೆಚ್ಚಿನ ಹಣ ಪಾವತಿಸಿದ್ದರ ಬಗ್ಗೆ ನೋಟೀಸು ಕೊಟ್ಟಿರುವುದಿಲ್ಲ. ಕೆಲಸ ಜಾರಿಯಲ್ಲಿದ್ದ ಸಮಯದಲ್ಲಿ ಸಾಮಾಗ್ರಿಗಳ ಬೆಲೆ ಏರಿದ್ದಕ್ಕೆ ನಾವು ಪರಿಹಾರಹರ್ಥವಾಗಿ ಚಾಲ್ತಿ ದರಗಳನ್ನು ಪಾವತಿ ಮಾಡಿರುತ್ತೇವೆ. ವಾದಿಯರು ಕೇಳಿದ ಪ್ರಮಾಣದಲ್ಲಿ ನಾವು ದರ ಏರಿಕೆ ಪಾವತಿ ಮಾಡಿಲ್ಲ ಅನ್ನುವುದು ನಿಜ.

12. ದಾವಾ ಬೇಡಿಕೆ ಸಂಖ್ಯೆ 2 ಕ್ಕೆ ಸಂಬಂದಿಸಿದಂತೆ ವಾದಿಯರು ನೀಡಿದ ನಿಪಿ 36 ಮತ್ತು 56 ಕ್ಕೆ ನಾವು ಉತ್ತರಿಸಿರುವುದಿಲ್ಲ. ನೀರಿನ ಪೂರೈಕೆಯ ತುಂಬಾ ದೂರು ಇದ್ದಿದ್ದರಿಂದ ಅದರ ಹೆಚ್ಚಿನ ವೆಚ್ಚ ಪಾವತಿಗಾಗಿ ವಾದಿಯರು ನೀಡಿದ ನಿಪಿ 33, 34 ಮತ್ತು 45 ರ ನೋಟೀಸುಗಳಿಗೆ ನಾವು ಉತ್ತರಿಸಿರುವುದಿಲ್ಲ, ಕಾರಣ ಅದೆಲ್ಲವೂ ಟೆಂಡರ್ ನಿಯಮಾವಳಿಗೆ ಒಳಪಟ್ಟಿತ್ತು. ವಾದಿಯರ ಬೇಡಿಕೆಯನ್ನು ಪರಿಗಣಿಸಿ ಬೆಲೆ ಏರೀಕೆಯ ಭಾರವನ್ನು ತಗ್ಗಿಸಲು ನಾವು ಹೆಚ್ಚಿನ ಹಣ ಪಾವತಿಸಿದ್ದರ ಬಗ್ಗೆ ವಾದಿಗೆ ಲಿಖಿತವಾಗಿ ತಿಳಿಸಿಲ್ಲ.

13. ಬೇಡಿಕೆ ಸಂಖ್ಯೆ 5 ಕ್ಕೆ ಸಂಬಂದಿಸಿದಂತೆ ಸೂಕ್ತ ವಿವರಣೆ ನೀಡಿದ್ದರ ಬಗ್ಗೆ ನನಗೆ ನೆನಪಿಲ್ಲ. ಬೇಡಿಕೆ ಸಂಖ್ಯೆ 6 ಮತ್ತು 7 ಕ್ಕೆ ಸಂಬಂದಿಸಿದಂತೆ ಕಾರ್ಮಿಕ ಮತ್ತು ಯಂತ್ರಗಳು ಸೂಕ್ತ ಸಮಯದಲ್ಲಿ ಸ್ಥಳದಲ್ಲಿ ಲಭ್ಯವಿಲ್ಲದ್ದರ ಬಗ್ಗೆ ನಾವು ವಾದಿಗೆ ಲಿಖಿತ ವರದಿ ಮಾಡಿಲ್ಲ.

Com OS 3/2021
DW-1

**(ಈ ಹಂತದಲ್ಲಿ ಕುಮಾರಿ ಅಮಿತಾ ಶುಕ್ಲಾ ವಕೀಲರು ತೆರೆದ ನ್ಯಾಯಾಲಯದಲ್ಲಿ ಗಲಾಟೆ ಮಾಡಿ ಗಣಕಯಂತ್ರವನ್ನು ಹೊಡೆದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು)**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**10/02**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಯಚೂರು.**